




'ನಾರೇ' ಜಲಾಶಯ



ಜುಮೆ ಮಸೀದಿ

ಸ್ವಲ್ಪ ಮುಂದೆ ನಡೆಯುತ್ತಾ ಹೋದ ಹಾಗೆ ಮನೆಯ ಮುಂದೆ ಬಿಸಿಲು ಕಾಯಿಸುತ್ತಿದ್ದ ಹಲವರನ್ನು ಕಂಡೆವು. ಅಲ್ಲಿದ್ದ ಹೆಂಗಳೆಯರನ್ನು ನೋಡಿದಾಗ, ಉತ್ತರ ಕರ್ನಾಟಕದ ರೈಲ್ವೆ ನಿಲ್ದಾಣಗಳ ಪಕ್ಕದಲ್ಲಿಯೇ ಟೆಂಟ್‌ಗಳನ್ನು ಹಾಕಿ ಕೂಲಿಂಗ್ ಗ್ಲಾಸ್‌ಗಳು ಮತ್ತಿತರ ಸಾಮಗ್ರಿಗಳನ್ನು ಮಾರಾಟ ಮಾಡುತ್ತಾ ರಸ್ತೆಯಲ್ಲೇ ಚಕ್ಕಡಿಯೆಂದು ಕರೆಯುವ ಜೂಜಾಟವನ್ನು ಆಡಿಸುತ್ತಿದ್ದ ಇರಾನಿ ಜನರ ನೆನಪಾಯಿತು. ಅಬ್ಯಾನೆ ಮಹಿಳೆಯರು ಮೊಣಕಾಲಿಗಿಂತ ಕೆಳಗೆ ಬರುವ ಲಂಗ, ಅದರ ಮೇಲೆ ಕಮೀಜ್ ಧರಿಸಿ, ತಲೆಯ ಮೇಲೆ ಚಿತ್ತಾಕರ್ಷಕವಾದ ಹೂವಿನ ಚಿತ್ತಾರಗಳಿರುವ ಸ್ಕಾರ್ಫ್ ಕಟ್ಟುತ್ತಾರೆ. ಇಲ್ಲಿಯ ಪುರುಷರು ಪ್ಯಾಂಟ್, ಶರ್ಟ್ ಹಾಗೂ ಕೋಟನ್ನು ಧರಿಸಿ ತಲೆಯ ಮೇಲೆ ಟೋಪಿಯೊಂದನ್ನು ಧರಿಸುತ್ತಾರೆ. ಅಬ್ಯಾನೆಯ ಸ್ತ್ರೀಯರು ತಮ್ಮ ವಿವಾಹದ ಸಮಯದಲ್ಲಿ ಧರಿಸಿದ ಗೌನ್ ಅನ್ನು ತಮ್ಮ ಮಗಳ ಮದುವೆಯ ಸಮಯದಲ್ಲಿ ಅವಳಿಗೆ ನೀಡುತ್ತಾರೆ ಎಂದು ನಮ್ಮ ಗೈಡ್ ವಿವರಿಸಿದ.

ಅಲ್ಲೇ ಕುಳಿತಿದ್ದ ಕೆಲವು ಸ್ತ್ರೀಯರ ಜೊತೆ ನಾನು ಫೋಟೋ ತೆಗೆಸಿಕೊಂಡೆ. ಅಲ್ಲಿಯ ಜನರ ಭಾಷೆ ಸ್ವಲ್ಪವೂ ಅರ್ಥವಾಗಲಿಲ್ಲ. 'ಈ ಬುಡಕಟ್ಟು ಜನರು ಮಾತನಾಡುವ ಭಾಷೆ ನಮಗೂ ಅರ್ಥವಾಗುವುದಿಲ್ಲ. ಶತಮಾನಗಳ ಹಿಂದೆ ಯಾವ ಭಾಷೆ ಮಾತನಾಡುತ್ತಿದ್ದರೋ ಅದನ್ನೇ ಇಂದಿಗೂ ಮಾತನಾಡುತ್ತಾರೆ. ನಮ್ಮ ಕಡೆ ಇದನ್ನು ಪಾರ್ಥಿಯನ್ ಪಲ್ಲವಿ ಎಂದು ಕರೆಯುತ್ತೇವೆ. ಈಗ ನೀವು ನೋಡುತ್ತಿರುವ ಜನರು ಗ್ರಾಮದ ಹಿರಿಯರು. ಗ್ರಾಮದ ಕಿರಿಯರಲ್ಲೆರೂ ದೂರದ ಊರುಗಳಿಗೆ ವಲಸೆ ಹೋಗಿದ್ದಾರೆ. ಅವರೆಲ್ಲಾ ವೈದ್ಯರು, ಇಂಜಿನಿಯರ್‌ಗಳು, ಅಕೌಂಟೆಂಟ್‌ಗಳಂತಹ ಉತ್ತಮ ಹುದ್ದೆಗಳನ್ನು ಹೊಂದಿದ್ದಾರೆ. ಅವರು ಪ್ರತಿ ವರ್ಷವೂ ಒಂದು ದಿನ ತಮ್ಮ ಮಾತೃಗ್ರಾಮಕ್ಕೆ ಮರಳುತ್ತಾರೆ' ಎನ್ನುವ ಮಾಹಿತಿ ತಿಳಿಯಿತು.

ಮುಂದೆ ನಡೆದಾಗ ಕೆಲವು ಹೆಂಗಳೆಯರು ಪ್ರಯಾಣಿಕರಿಗೆ ಬೇಕಾಗುವ ತಿಂಡಿ ತಿನಿಸು ಹಾಗೂ ಹಣ್ಣುಗಳನ್ನು ಮಾರಾಟ ಮಾಡುತ್ತಿದ್ದರು. ಆ ಹಳ್ಳಿಯ ಜನರು ಗೋಧಿ, ಬಾರ್ಲಿ, ಕೆಲವು ಹಣ್ಣುಗಳು ಮತ್ತು ಆಲೂಗೆಡ್ಡೆಗಳನ್ನು ಬೆಳೆಯುತ್ತಾರಂತೆ.

ಅಬ್ಯಾನೆ ಗ್ರಾಮದ ಮುಖ್ಯ ಕಟ್ಟಡವೇ ಜುಮ್ಮಾ ಮಸೀದಿ. ಆಕ್ರೋಟ್ ಮರದಿಂದ ಕಟ್ಟಲಾಗಿರುವ ಈ ಮಸೀದಿಯನ್ನು ಹನ್ನೊಂದನೇ ಶತಮಾನದಲ್ಲಿ ಕಟ್ಟಲಾಯಿತಂತೆ. ಮರದ ದೊಡ್ಡ ದೊಡ್ಡ ಕಂಬಗಳು ಇಲ್ಲಿದ್ದು, ಈ ಮಸೀದಿಯಲ್ಲಿ ಕಾಣುವ ಕೆತ್ತನೆ ಕೆಲಸಗಳು ಸೂಕ್ಷ್ಮವಾಗಿವೆ. ಮಸೀದಿಯಲ್ಲದೇ ಈ ಊರಿನಲ್ಲಿ ಅತ್ಯಂತ ಪುರಾತನ ಜೋರಾಸ್ಟ್ರೀಯನ್ ಅಗ್ನಿ ದೇವಾಲಯವೂ ಇದೆ.

ಊರ ಹೊರವಲಯದಲ್ಲಿ ಮೂರು ಸಣ್ಣ ಕೋಟೆಗಳು ಇವೆ. ಅಲ್ಲಿಗೆ ಹೋಗಬೇಕಾದರೆ ನಡೆದೇ ಹೋಗಬೇಕಾದ್ದರಿಂದ ನಾವು ಅಲ್ಲಿಗೆ ಹೋಗಲು ಸಾಧ್ಯವಾಗಲಿಲ್ಲ. ಹಳ್ಳಿಯಲ್ಲಿ ಹಲವಾರು ಝರಿಗಳು ಹರಿಯುವುದರಿಂದ ಜನರಿಗೆ ನೀರಿನ ಸಮಸ್ಯೆಯಿಲ್ಲ. 'ನಾರೇ' ಎನ್ನುವ ಜಲಾಶಯವೂ ಸಮೀಪದಲ್ಲಿದೆ.

ಅಬ್ಯಾನೆಗೆ ನಾವು ಹೋದಾಗ ಹಲವಾರು ಶತಮಾನಗಳು ಹಿಂದಕ್ಕೆ ಹೋದಂತೆ ಭಾಸವಾಯಿತು. ಯುನೆಸ್ಕೋದ ವಿಶ್ವಪಾರಂಪರಿಕ ಸ್ಥಳಗಳ ಪಟ್ಟಿಗೆ ಈ ಗ್ರಾಮವನ್ನು ಸೇರಿಸಲು ಇರಾನ್ ಸರ್ಕಾರ ಪ್ರಯತ್ನಿಸುತ್ತಿದೆಯಂತೆ. ●